(ಗೊಂದಲ)

ಅಧ್ಯಕ್ಷರು : ದಯಮಾಡಿ ನಾನು ಹೇಳುವುದನ್ನು ಕೇಳಿ. ಎಲ್ಲಾ ರೀತಿಯ ತನಿಖೆಗೂ ನಾನು ಸಿದ್ಧನಿದ್ದೇನೆ, ಕೆಲವೆಲ್ಲಾ ನನಗೂ ಮನವರಿಕೆಯಾಗಿದೆ, ಸದನ ಒಪ್ಪಿದರೆ ಸದನ ಸಮಿತಿಯನ್ನೂ ಸಹ ಮಾಡಬಹುದೆಂದು' ಹೇಳಿದ್ದಾರೆ. He has got open mind. ಸದನ ಸಮಿತಿ ಮಾಡಬೇಕೆನ್ನುವುದಾದರೆ ಮಾಡೋಣ.

ಶ್ರೀ ಹೆಚ್. ಡಿ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ಇಷ್ಟರಲ್ಲಿಯೇ ನಾನು ನಿರ್ಧಾರ ತೆಗೆದುಕೊಂಡು ಹೇಳುತ್ತೇನೆ.

ಅಧ್ಯಕ್ಷರು : ಆಯಿತು. in consultaion ಸದನ ಮಾಡೋಣ. ನಾಯಕರು, ವಿರೋಧ ಪಕ್ಷದ ನಾಯಕರೆಲ್ಲರನ್ನು ಕೇಳಿ ಒಂದು ಸದನ ಸಮಿತಿಯನ್ನು ಸಹ ಮಾಡೋಣ, ಆ report ಮೇಲೆ ವ್ಯಾಪಕವಾದ ಒಂದು ಕ್ರಮವನ್ನು ತೆಗೆದುಕೊಳ್ಳಲಿ.

ಶ್ರೀ ನಾಟಾಳ್ ನಾಗರಾಜ್ : ಸದನ ಸಮಿತಿಯನ್ನು ತಾವು ತಕ್ಷಣ ಇವತ್ತೇ ಮಾಡಿ. ಇವತ್ತೇ ಮಾಡಿದರೆ ಅದಕ್ಕೊಂದು ಬೆಲೆ ಬರುತ್ತದೆ.

(ಗೊಂದಲ)

ಅಧ್ಯಕ್ಷರು : ಆಯಿತು, ಮಾಡೋಣ.

ಕರ್ನಾಟಕದ ಎಸ್.ಟಿ.ಎಫ್. ಪೊಲೀಸರಿಗೆ ಪರಿಹಾರ ಮತ್ತು ಬಹುಮಾನ ನೀಡುವುದು.

(11) 84. ಶ್ರೀ ಧ್ರುವನಾರಾಯಣ ಆರ್. (ಸಂತೇಮರಳ್ಳಿ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ವೀರಪ್ಪನ್ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದ ತಮಿಳುನಾಡಿನ ಎಸ್.ಟಿ.ಎಫ್. ಪೊಲೀಸರಿಗೆ ತಮಿಳುನಾಡು ಸರ್ಕಾರ ನೀಡಿರುವ ಬಹುಮಾನ ಹಾಗೂ ಪರಿಹಾರ ಸರ್ಕಾರಕ್ಕೆ ಗೊತ್ತಿದೆಯೇ

ಆ) ಹಾಗಿದ್ದಲ್ಲಿ, ಅವುಗಳ ವಿವರಗಳೇನು? ಕರ್ನಾಟಕದ ಎಸ್.ಟಿ.ಎಫ್. ಪೊಲೀಸರಿಗೆ ಸರ್ಕಾರ ನೀಡಿರುವ ಪರಿಹಾರ ಮತ್ತು ಬಹುಮಾನಗಳ ವಿವರಗಳೇನು? (ವಿವರ ನೀಡುವುದು)

ಶ್ರೀ ಹೆಚ್. ಡಿ. ಕುಮಾರಸ್ವಾಮಿ (ಮುಖ್ಯ ಮಂತ್ರಿಗಳು)

ಅ) ಇಲ್ಲ.

ಆ) ತಮಿಳುನಾಡು ಸರ್ಕಾರವು ನೀಡಿದ ಪರಿಹಾರ ಬಹುಮಾನದ ವಿವರಗಳು ಲಭ್ಯವಿರುವುದಿಲ್ಲ.

ನರಹಂತಕ ವೀರಪ್ಪನ್ ಹಾಗೂ ಆತನ ತಂಡದ 3 ಜನ ಸದಸ್ಯರನ್ನು ಸಂಹಾರ ಮಾಡಿದ ದಿನಾಂಕ:18/10/2004 ರಂದು ಕಾರ್ಯಾಚರಣೆ ಪಡೆಯಲ್ಲಿದ್ದ ಎಲ್ಲಾ 754 ಪೊಲೀಸ್ ಅಧಿಕಾರಿಗಳಿಗೆ/ಸಿಬ್ಬಂದಿ ವರ್ಗದವರಿಗೆ ಅವರುಗಳು ಕಾರ್ಯಾಚರಣೆ ಪಡೆಯಲ್ಲಿ ಸೇವೆ ಸಲ್ಲಿಸಿದ ಅವಧಿಗನುಗುಣವಾಗಿ ಸರ್ಕಾರಿ ಆದೇಶದ ಸಂಖ್ಯೆ:ಹೆಚ್‌ಡಿ:33:ಪಿಒಪಿ:2005 ದಿನಾಂಕ:08/07/2005ರಲ್ಲಿ ಈ ಕೆಳಗಿನಂತೆ ನಗದು ಬಹುಮಾನವನ್ನು ಮಂಜೂರಾತಿ ನೀಡಿದೆ.

3 ವರ್ಷ ಮತ್ತು ಅದಕ್ಕೂ ಮೇಲ್ಪಟ್ಟು ರೂ. 3.00 ಲಕ್ಷ
2 ವರ್ಷ ಮತ್ತು 3 ವರ್ಷದೊಳಗೆ ರೂ.2.00 ಲಕ್ಷ
1 ವರ್ಷ ಮತ್ತು 2 ವರ್ಷದೊಳಗೆ ರೂ.1.00 ಲಕ್ಷ
1 ವರ್ಷಕ್ಕಿಂತ ಕಡಿಮೆ ರೂ.50,000/- ಹಾಗೂ ಅವರುಗಳ ಸ್ವಗ್ರಾಮದ (Home Town) ಜಿಲ್ಲಾ ಕೇಂದ್ರಗಳಲ್ಲಿ ಅಥವಾ ಅವರು ಇಚ್ಛಿಸುವ ಜಿಲ್ಲೆಯ ಇತರ ಸ್ಥಳದಲ್ಲಿ ಈ ಕೆಳಗಿನ ಅಳತೆಯ ಉಚಿತ ನಿವೇಶನ ಹಂಚುವುದು. ಇನ್ಸ್‌ಪೆಕ್ಟರ್ ವೃಂದಕ್ಕಿಂತ ಕೆಳಮಟ್ಟದ ವೃಂದದವರಿಗೆ 30'X40' ಡಿ.ವೈ.ಎಸ್.ಪಿ. ವೃಂದಕ್ಕೆ ಮೇಲ್ಪಟ್ಟ ವೃಂದದವರಿಗೆ 40'X60' ಮತ್ತು ದಿನಾಂಕ:18/10/2004 ರಂದು ಎಸ್.ಟಿ.ಎಫ್. ಪಡೆಯಲ್ಲಿದ್ದ ಎಲ್ಲಾ ಸಿಬ್ಬಂದಿಗೂ ಒಂದು ಬಾರಿಗೆ ಮಾತ್ರ ಒಂದು ವೇತನ ಬಡ್ತಿಯನ್ನು ಮಂಜೂರು ಮಾಡಿದೆ.

ಪೂರಕ ಟಿಪ್ಪಣಿ

ನರಹಂತಕ, ದಂತಚೋರ ವೀರಪ್ಪನ್ ಹಾಗೂ ಆತನ ಸಹಚರರ ಉಪಟಳವನ್ನು ನಿಗ್ರಹಿಸುವ ಸಲುವಾಗಿ ಕರ್ನಾಟಕ ಸರ್ಕಾರವು ದಿನಾಂಕ:13/04/1993ರಲ್ಲಿ ಪೂರ್ಣ ಪ್ರಮಾಣದ ಕಾರ್ಯಾಚರಣೆ ಪಡೆಯನ್ನು ರಚಿಸಿತು. ಅದೇ ರೀತಿಯಲ್ಲಿ ತಮಿಳುನಾಡಿನಲ್ಲಿಯೂ ಕೂಡ ಕಾರ್ಯಾಚರಣೆ ಪಡೆಗಳು ಪ್ರಾರಂಭದಿಂದಲೂ ಎಲ್ಲಾ ಹಂತಗಳಲ್ಲಿಯೂ ಜಂಟಿಯಾಗಿ ಕಾರ್ಯಾಚರಣೆಯನ್ನು ನಡೆಸುತ್ತಾ, ಬಂದಿದ್ದು ಇದರ ಪರಿಣಾಮವಾಗಿ ದಿನಾಂಕ:18/10/2004 ರಂದು ವೀರಪ್ಪನ್ ಹಾಗೂ ಆತನ ಉಳಿದಿದ್ದ ಎಲ್ಲಾ ಸಹಚರರ ಹತ್ಯೆಯ ಮೂಲಕ ಕಾರ್ಯಾಚರಣೆಯು ಯಶಸ್ವಿಯಾಗಿ ಮುಕ್ತಾಯಗೊಂಡಿರುತ್ತದೆ.

ವೀರಪ್ಪನ್ ಹಾಗೂ ಆತನ ತಂಡದ ವಿರುದ್ಧ ಕಾರ್ಯಾಚರಣೆಯು ದಿನಾಂಕ:13/04/1993ರಲ್ಲಿ ಪ್ರಾರಂಭವಾದಾಗಿನಿಂದ ದಿನಾಂಕ:18/10/2004 ರಂದು ವೀರಪ್ಪನ್ ಮತ್ತು ಆತನ ತಂಡದ ಉಳಿದ ಸದಸ್ಯರ ಹತ್ಯೆಯಾಗುವವರೆಗೆ ಕರ್ನಾಟಕ ರಾಜ್ಯದ ವಿವಿಧ ಪೊಲೀಸ್ ಘಟಕಗಳಿಂದ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳನ್ನು ನಿಯೋಜನೆಯ ಮೇಲೆ

ನೇಮಕ ಮಾಡುತ್ತಿದ್ದು, ವಿವಿಧ ಅಧಿಕಾರಿ/ಸಿಬ್ಬಂದಿಗಳು ವಿವಿಧ ಹಂತಗಳಲ್ಲಿ ವಿವಿಧ ಅವಧಿಯಲ್ಲಿ ಕಾರ್ಯಾಚರಣೆ ಪಡೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತಾರೆ.

ಈ ಕಾರ್ಯಾಚರಣೆಯಲ್ಲಿದ್ದ ಅತ್ಯಂತ ಕ್ಲಿಷ್ಟಕರ ಪರಿಸ್ಥಿತಿ, ಪ್ರಾಣದ ಹಂಗನ್ನೂ ತೊರೆದು ಕರ್ತವ್ಯ ನಿರ್ವಹಿಸಿದ ಅಧಿಕಾರಿಗಳು ಹಾಗೂ ಸಿಬ್ಬಂದಿಯ ಕಾರ್ಯವನ್ನು ಮಾನ್ಯ ಮುಖ್ಯಮಂತ್ರಿಗಳು ದಿನಾಂಕ:21/10/2004ರ ಪೊಲೀಸ್ ಹುತಾತ್ಮರ ದಿನಾಚರಣೆಯ ಪೆರೇಡ್‌ನಲ್ಲಿ ಭಾಗವಹಿಸಿದ ಸಂದರ್ಭದಲ್ಲಿ ಮುಕ್ತಕಂಠದಿಂದ ಶ್ಲಾಘಿಸಿ ದಿನಾಂಕ:18/10/2004ರ ಕಾರ್ಯಾಚರಣೆಯಲ್ಲಿ ಭಾಗವಹಿಸಿದ ಕರ್ನಾಟಕ ಎಲ್ಲಾ ಅಧಿಕಾರಿ/ಸಿಬ್ಬಂದಿಗಳಿಗೂ ತಮಿಳುನಾಡು ಸರ್ಕಾರ ಘೋಷಿಸಿರುವ ರೀತಿಯಲ್ಲಿ ಸೂಕ್ತ ಬಹುಮಾನ ನೀಡುವುದಾಗಿ ಘೋಷಿಸಿರುತ್ತಾರೆ. ಆ ಪ್ರಕಾರ ಸರ್ಕಾರಿ ಆದೇಶದ ಸಂಖ್ಯೆ:ಹೆಚ್‌ಡಿ:33:ಪಿಒಪಿ: 2005 ದಿನಾಂಕ:08/07/2005ರ ಆದೇಶದಲ್ಲಿ ದಿನಾಂಕ:18/10/2004ರಂದು ಕಾರ್ಯಾಚರಣೆ ಪಡೆಯಲ್ಲಿದ್ದ ಎಲ್ಲಾ 754 ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗೆ ಅವರುಗಳ ಕಾರ್ಯಾಚರಣೆ ಪಡೆಯಲ್ಲಿ ಸೇವೆ ಸಲ್ಲಿಸಿದ ಅವಧಿಗನುಗುಣವಾಗಿ ಬಹುಮಾನವನ್ನು ನೀಡಿದೆ.

ಶ್ರೀ ಆರ್. ಧ್ರುವನಾರಾಯಣ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಆದರೆ, ನಾನು ಕೇಳಿದ ಮೊದಲನೇ ಪ್ರಶ್ನೆಗೆ 'ಇಲ್ಲ' ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ ಹಾಗೆಯೇ 2ನೇ ಪ್ರಶ್ನೆಗೆ ಸಹ 'ಇಲ್ಲ' ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಜೊತೆಗೆ ತಮಿಳುನಾಡು ಸರ್ಕಾರವು ನೀಡಿದ ಪರಿಹಾರ ಬಹುಮಾನದ ವಿವರಗಳು ಲಭ್ಯವಿರುವುದಿಲ್ಲ ಎಂದೂ ಕೂಡ ಆ ಉತ್ತರದಲ್ಲಿ ತಿಳಿಸಿದ್ದಾರೆ. ನನಗೆ ತಿಳಿದಿರುವ ಮಾಹಿತಿ ಪ್ರಕಾರ, ತಮಿಳುನಾಡು ಸರ್ಕಾರ ವೀರಪ್ಪನ್ ಹತನಾದ ಒಂದು ತಿಂಗಳೊಳಗಾಗಿಯೇ ಒಬ್ಬ ಕಾನ್‌ಸ್ಟೇಬಲ್‌ನಿಂದ ಹಿಡಿದು ಐಪಿಎಸ್ ಅಧಿಕಾರಿ ವರೆಗೆ ಕೂಡ 3 ಲಕ್ಷ ರೂಪಾಯಿಗಳ ನಗದು ಹಣ, ಒಂದು ಖಾಲಿ ನಿವೇಶನ, ಒಂದು promotion ಅಂದರೆ ಮುಂಬಡ್ತಿ ಮತ್ತು ಒಂದು ಮುಖ್ಯಮಂತ್ರಿಗಳ ಚಿನ್ನದ ಪದಕ ಇಷ್ಟನ್ನು ಕೂಡ ಅವರಿಗೆ ಆ ಒಂದು ಪರಿಹಾರವನ್ನು ಒದಗಿಸಿದ್ದಾರೆ. ಆದರೆ, ಇವತ್ತು ನಮ್ಮ ಕರ್ನಾಟಕ ರಾಜ್ಯ ಸರ್ಕಾರ ಅವನು ಹತನಾಗಿ ಒಂದು ವರ್ಷ ಐದು ತಿಂಗಳೂ ಕಳೆದಿದ್ದರೂ ಕೂಡ ಪರಿಹಾರವನ್ನು ಕೊಡಲಾಗುವುದೆನ್ನುವ ಘೋಷಣೆಯನ್ನು ಮಾತ್ರ ಮಾಡಿದ್ದಾರಷ್ಟೇ ಹೊರತು ಅದನ್ನು implement ಮಾಡಿಲ್ಲ. ವೀರಪ್ಪನ್ ಕಾರ್ಯಾಚರಣೆಯಲ್ಲಿ ಕರ್ನಾಟಕ ಪೋಲಿಸರ ಕೊಡುಗೆ ಅಪಾರವಾಗಿದೆ. ವೀರಪ್ಪನ್ ತಂಡವನ್ನು ಕಡಿಮೆ ಮಾಡುವುದರಲ್ಲಿ, ನಿಗ್ರಹ ಮಾಡುವುದರಲ್ಲಿ ದಮನ ಮಾಡುವುದರಲ್ಲಿ ಬಹಳಷ್ಟು ಶ್ರಮವಹಿಸಿದ್ದಾರೆ.

ದಯಮಾಡಿ ಅವರೆಲ್ಲರಿಗೂ ಕೂಡ ತಾವೇನು ಘೋಷಣೆ ಮಾಡಿದ್ದೀರೋ, ನಮ್ಮ ಸರ್ಕಾರ ಘೋಷಣೆ ಮಾಡಿರುತಕ್ಕಂಥದ್ದು ಒಂದು increment ಕೊಡುತ್ತೇವೆಂದು, ಆದರೆ ಅವರಿಗೆ ಒಂದು promotion ಕೊಡುವಂಥಾದ್ದು ಆಗಬೇಕು. ತಮಿಳುನಾಡು ಸರ್ಕಾರ ಆ ಒಂದು ಕಾರ್ಯಾಚರಣೆಯಲ್ಲಿದ್ದಂಥ ಎಸ್.ಪಿ.ಗಳಿಗೆ ಡಿ.ಐ.ಜಿ ಮಾಡಿರತಕ್ಕಂಥದ್ದು, ಒಬ್ಬ constable ಅನ್ನು Sub-Inspector ಮಾಡಿದ್ದಾರೆ. ಅದೇ ರೀತಿ ನಮ್ಮಲ್ಲೂ ಕೂಡ ಏಕೆಂದರೆ ಪೊಲೀಸರಿಗೆ ನಾವು ಈ ರೀತಿಯ ಸಹಾಯ ಮಾಡಿದರೆ ಅವರ ಮನಃಸ್ಥೈರ್ಯ ಹೆಚ್ಚುತ್ತದೆ. ಈಗಾಗಲೇ ತಾವು ಎಸ್.ಟಿ.ಎಫ್. ಪೊಲೀಸರನ್ನು ನಕ್ಸಲೈಟ್ಸ್ ತಡೆಗೆ ಸಹ ನಿಯೋಜನೆ ಮಾಡಿದ್ದೀರಿ. ಆದ್ದರಿಂದ, ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ದಯಮಾಡಿ, ಒಂದು ದೊಡ್ಡ ಸಮಾರಂಭವನ್ನು ಮಾಡಿ, ಅವರಿಗೆ ಆ ಧೈರ್ಯ, ಮನಃಸ್ಥೈರ್ಯ ಬರಬೇಕಾದರೆ ಅವರಿಗೆ ಈ ರೀತಿಯ ಬಹುಮಾನವನ್ನು ತತ್‌ಕ್ಷಣ, ಹಿಂದೆ ಸರ್ಕಾರ ಏನು ಘೋಷಣೆ ಮಾಡಿದೆ, ಅದನ್ನು ಅವರಿಗೆ ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಭಾಷಣ ಮಾಡಿದ ಹಾಗೆ ಹೇಳಿದರೆ ಆಗುವುದಿಲ್ಲ. ಪೀಠಿಕೆಯನ್ನು ಈ ತರಹ ಮಾಡಿದರೆ ಹೇಗೆ?

ಶ್ರೀ ಸಿ.ಕೃಷ್ಣಬೈರೇಗೌಡ : ಮಾನ್ಯ ಅಧ್ಯಕ್ಷರೆ, ಶ್ರೀ ಧ್ರುವನಾರಾಯಣ ರವರು ಹೇಳಿರುವಂಥದ್ದು ಬಹಳ ಗಂಭೀರವಾದಂಥ ವಿಷಯವಾಗಿದೆ. ಏನೊಂದು ಪೊಲೀಸ್ ಪಡೆ ಇದೆ ಅದಕ್ಕೆ ನೈತಿಕವಾಗಿ ಬೆಂಬಲವನ್ನು ತೋರಿಸಬೇಕಾದರೆ ನಾವೇನು ಮಾತು ಕೊಟ್ಟಿದ್ದೇವೆ, ಆ ಮಾತನ್ನು ಉಳಿಸಿಕೊಳ್ಳಬೇಕಾಗುತ್ತದೆ. ಅದರ ಜೊತೆಗೆ ಈ ವಿಷಯದಲ್ಲಿ ಸ್ವಲ್ಪ ಹೆಚ್ಚುಕಡಿಮೆ ಯಾಗಿದೆ ಏನ್ನುವುದು ನನ್ನ ಅಭಿಪ್ರಾಯವಾಗಿದೆ. ಏಕೆಂದರೆ, ಅರಣ್ಯ ಇಲಾಖೆಯವರೂ ಸಹ ಪೊಲೀಸ್‌ನವರ ಜೊತೆಯಲ್ಲಿ ಹೆಜ್ಜೆಗೆ ಹೆಜ್ಜೆ ಹಾಕಿ ಅರಣ್ಯ ಇಲಾಖೆಯ ಸಿಬ್ಬಂಧಿಗಳೂ ಕೂಡ ಸಾಕಷ್ಟು ಕಷ್ಟನಷ್ಟಗಳನ್ನು ಅನುಭವಿಸಿದ್ದಾರೆ. ಡಿ.ಸಿಎಫ್. ಆಗಿರಬಹುದು, ಹಿಂದೆ ಯಾರ್ಯಾರು ವೀರಪ್ಪನ್ ಅನ್ನು ಹಿಡಿಯಲಿಕ್ಕೆ ಹೋಗಿ ತೀರಿಕೊಂಡಿದ್ದಾರೆ. ಅರಣ್ಯ ಇಲಾಖೆಯವರು ಯಾರ್ಯಾರು ಪ್ರಾಣತ್ಯಾಗ ಮಾಡಿದ್ದಾರೆನ್ನುವುದು ನಮ್ಮ ಕಣ್ಣ ಮುಂದಿದೆ. ಆದರೆ, ಅರಣ್ಯ ಇಲಾಖೆಯ ಸಿಬ್ಬಂದಿಗೆ ಯಾವುದೇ ರೀತಿ ಸೌಲಭ್ಯವನ್ನು ಸರ್ಕಾರ ಘೋಷಣೆ ಮಾಡಿಲ್ಲ. ಮಾನ್ಯ ಮುಖ್ಯಮಂತ್ರಿಗಳಿಗೆ ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ. ಮಾನ್ಯ ಅರಣ್ಯ ಸಚಿವರು ಈಗ ತಾನೇ ಎದ್ದು ಆಚೆಕಡೆಗೆ

ಹೋದಹಾಗೆ ಇದೆ. ತಡವಾದರೂ ಸಹ ಅರಣ್ಯ ಇಲಾಖೆಯಲ್ಲೂ ಸಹ ಯಾರ್ಯಾರು ಎಸ್.ಟಿ.ಎಫ್‌ನಲ್ಲಿ ಕೆಲಸ ಮಾಡಿದರು, ಅವರಿಗೂ ಇದೇ ಸೌಲಭ್ಯವನ್ನು extend ಮಾಡಲಿಕ್ಕೆ ದಯವಿಟ್ಟು ಸರ್ಕಾರ ತೀವ್ರವಾಗಿ ಯೋಚನೆ ಮಾಡಬೇಕಾಗುತ್ತದೆ. ಒಬ್ಬರಿಗೆ ಕೊಡುವುದು ಇನ್ನೊಬ್ಬರಿಗೆ ಕೊಡದಿರುವುದು ಆಗಬಾರದು. ಅದು ಒಳ್ಳೆಯದಲ್ಲವೆಂದು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ.

ಶ್ರೀ ಹೆಚ್. ಡಿ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಈ ವಿಷಯದ ಬಗ್ಗೆ ಹಿಂದಿನ ಸರ್ಕಾರವೇ 6-7-2005ನೇ ಇಸವಿಯಲ್ಲಿ ಸುಮಾರು 754 ಪೊಲೀಸ್ ಅಧಿಕಾರಿಗಳಿಗೆ ಮತ್ತು ಸಿಬ್ಬಂದಿ ವರ್ಗದವರಿಗೆ ಘೋಷಣೆಯನ್ನು ಮಾಡಿದ್ದಾರೆ, ತೀರ್ಮಾನವೂ ಆಗಿದೆ. ಸಧ್ಯದಲ್ಲಿಯೇ ಈ ಹಣವನ್ನು ಮತ್ತು ಅವರಿಗೆ ನಿವೇಶನ ಕೊಡತಕ್ಕಂಥದ್ದು ಇದೆಲ್ಲವನ್ನೂ ಆದಷ್ಟು ಬೇಗ ನಾವು ಅವರಿಗೆ ತಲುಪಿಸತಕ್ಕಂಥ ಕೆಲಸವನ್ನು ಮಾಡುತ್ತೇವೆ.

ಅಧ್ಯಕ್ಷರು : ಒಂದೊಂದು ಪ್ರಶ್ನೆಗೆ ಬಹಳ ಹೊತ್ತು ತೆಗೆದುಕೊಂಡರೆ ಆಗುವುದಿಲ್ಲ.

ಶ್ರೀ ಆರ್. ಧ್ರುವನಾರಾಯಣ್ : ಮಾನ್ಯ ಅಧ್ಯಕ್ಷರೆ, ಒಂದು ಸಮಯವನ್ನು ನಿಗಧಿ ಮಾಡಿ ಹೇಳಿದರೆ ಒಳ್ಳೆಯದು.

ಶ್ರೀ ಹೆಚ್. ಡಿ. ಕುಮಾರಸ್ವಾಮಿ : ಕೆಲವೇ ದಿವಸಗಳಲ್ಲಿ ಮಾಡುತ್ತೇನೆಂದು ಹೇಳಲಿಕ್ಕೆ ಬಯಸುತ್ತೇನೆ.

ಬೀಳಗಿ ತಾಲ್ಲೂಕಿನಲ್ಲಿ ಕ್ರೀಡಾಂಗಣ ಮಂಜೂರು ಮಾಡುವ ಬಗ್ಗೆ.

(12) 97. ಶ್ರೀ ನಿರಾಣಿ ಮುರಗೇಶ್ ರುದ್ರಪ್ಪ (ಬೀಳಗಿ) ಮಾನ್ಯ ಯವಜನಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೀಳಗಿ ತಾಲ್ಲೂಕಿನಲ್ಲಿ ತಾಲ್ಲೂಕು ಕ್ರೀಡಾಂಗಣವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರ ಕ್ರೀಡಾಂಗಣ ಮಂಜೂರಾತಿಗೆ ತೆಗೆದು ಕೊಂಡಿರುವ ಕ್ರಮಗಳೇನು;

ಇ) ಯಾವಾಗ ಮಂಜೂರಾತಿ ಕೊಡಲಾಗುತ್ತದೆ ?

ಶ್ರೀ ಹನುಮಂತಪ್ಪ ವೈ. ಆಲ್ಕೋಡ್ (ಯುವಜನಸೇವಾ ಹಾಗೂ ಕ್ರೀಡಾಸಚಿವರು)

ಅ) ಸರ್ಕಾರದ ಗಮನಕ್ಕೆ ಬಂದಿದೆ.